■ ಶಶಿಕುಮಾರ್ ಸಿ.

# ಡಿಜಿಟಲ್ ಪೇಮೆಂಟ್ಸ್‌ನತ್ತ ಮಸ್ಕ್

ಭವಿಷ್ಯದಲ್ಲಿ ಎಕ್ಸ್ ಆ್ಯಪ್‌ನಡಿ ಎಲ್ಲ ರೀತಿಯ ಸೌಲಭ್ಯಗಳನ್ನು ಕಲ್ಪಿಸುವುದಾಗಿ ಈಚೆಗೆ ಎಲಾನ್ ಮಸ್ಕ್ ಹೇಳಿದ್ದರು. ಅಂತೆಯೇ ಕಾರ್ಯರೂಪಕ್ಕೆ ಕೈಹಾಕಿರುವ ಎಕ್ಸ್ ಸಂಸ್ಥೆಯು ತನ್ನ ವೇದಿಕೆಯಡಿ 'ಎಕ್ಸ್ ಮನಿ' ಡಿಜಿಟಲ್ ಪೇಮೆಂಟ್ಸ್ ಸೌಲಭ್ಯ ಕಲ್ಪಿಸುವುದಾಗಿ ಹೇಳಿದ್ದಾರೆ. 'ಎಕ್ಸ್ ಮನಿ' ಪ್ರತ್ಯೇಕ ಆ್ಯಪ್ ಆಗಿಯೂ ಕಾರ್ಯನಿರ್ವಹಿಸಲಿದೆ.

ಗೂಗಲ್ ಪೇ, ಫೋನ್‌ಪೇ ಮಾದರಿಯಂತೆ ಡಿಜಿಟಲ್ ಪಾವತಿಗಳನ್ನು 'ಎಕ್ಸ್ ಮನಿ'ಯಡಿ ಮಾಡಬಹುದು. ಈ ಮಾಹಿತಿಯನ್ನು ಈಚೆಗೆ ಸ್ವತಃ ಎಲಾನ್ ಮಸ್ಕ್ ಹಂಚಿಕೊಂಡಿದ್ದಾರೆ.

ಟ್ವಿಟರ್ ಅನ್ನು ಎಕ್ಸ್ ಆಗಿ ಪರಿವರ್ತಿಸಿದಂತೆ ಎಕ್ಸ್ ವೇದಿಕೆಯಲ್ಲಿ ಸಾಧ್ಯವಾಗುವ ಎಲ್ಲ

**ಎಕ್ಸ್ ಆ್ಯಪ್ ಅನ್ನು 'ಎವರಿಥಿಂಗ್ ಆ್ಯಪ್' ಮಾಡುವ ಪಣ ತೊಟ್ಟಂತಿರುವ ಎಲಾನ್ ಮಸ್ಕ್, ಎಕ್ಸ್ ಖಾತೆಗೆ ಸಾಧ್ಯವಾಗುವ ಎಲ್ಲ ಫೀಚರ್‌ಗಳನ್ನು ಕಲ್ಪಿಸಲು ಮುಂದಾಗಿದ್ದಾರೆ.**

ರೀತಿಯ ಡಿಜಿಟಲ್ ಸೇವೆಗಳನ್ನು ಕಲ್ಪಿಸುವುದು ಮಸ್ಕ್ ಉದ್ದೇಶವಾಗಿದೆ. 'ಎವರಿಥಿಂಗ್ ಆ್ಯಪ್'ನ ಅರ್ಥ ಎಕ್ಸ್ ವೇದಿಕೆಯಲ್ಲಿ ಸುದ್ದಿಯಿಂದ ಮನರಂಜನೆ, ಪಾವತಿವರೆಗೆ ಎಲ್ಲವನ್ನೂ ಪಡೆಯಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸಾಗುತ್ತಿರುವ ಮಸ್ಕ್, ಇದಕ್ಕೆ ಅಗತ್ಯವಿರುವ ಎಲ್ಲ ಮೂಲಸೌಕರ್ಯಗಳನ್ನು ಒದಗಿಸುತ್ತಿದ್ದಾರೆ. ಚೀನಾದ ವೀಚಾಟ್‌ನಂತೆ ಎಕ್ಸ್ ಅನ್ನು ರೂಪಿಸುವ ಉದ್ದೇಶವನ್ನು ಕಂಪನಿಯು ಹೊಂದಿದೆ.



### ಎಕ್ಸ್‌ನಲ್ಲಿ ಏನೆಲ್ಲಾ ಬರಬಹುದು?

- ಎಕ್ಸ್ ವಾಲೆಟ್ ರಚನೆ, ಅಗತ್ಯಕ್ಕೆ ತಕ್ಕಂತೆ ಹಣ ಸಂಗ್ರಹ.
- ಮೊಬೈಲ್ ರೀಚಾರ್ಜ್, ಬಿಲ್ ಪಾವತಿಯಂತಹ ಸೌಲಭ್ಯ.
- ಕ್ಷಿಪ್ರವಾಗಿ ಹಣ ವರ್ಗಾವಣೆ ಸಾಧ್ಯ.
- ಗ್ರಾಹಕರ ಸುರಕ್ಷತೆಗೆ ಹೆಚ್ಚಿನ ಆದ್ಯತೆ.
- ಡೆಬಿಟ್, ಕ್ರೆಡಿಟ್ ಕಾರ್ಡ್ ಲಿಂಕ್.
- ವಿಡಿಯೊ, ಆಡಿಯೊ ಕರೆಗೂ ಆದ್ಯತೆ.
- ಲೈವ್ ವಿಡಿಯೊ ಸ್ಟ್ರೀಮಿಂಗ್ ಹಾಗೂ ಆಡಿಯೊ ಕರೆಗಳಿಗೂ ಅವಕಾಶ
- ಗ್ರೋಕ್ ಎಐನಿಂದ ದತ್ತಾಂಶದ ನೆರವು.

### ಎಕ್ಸ್ ಮನಿ 'ಬೀಟಾ' ಬಿಡುಗಡೆ

ಎಕ್ಸ್ ಮನಿ ಫೀಚರ್ ಬೀಟಾ ಆವೃತ್ತಿಯು ಸದ್ಯ ಅಮೆರಿಕದಲ್ಲಿ ಪರೀಕ್ಷಾ ಹಂತದಲ್ಲಿದೆ. ಸೀಮಿತ ಬಳಕೆದಾರರಿಗೆ ಮಾತ್ರ ಇದು ಲಭ್ಯ. ಬಳಕೆದಾರರ ಸುರಕ್ಷತೆ ಹಾಗೂ ಭದ್ರತಾ ದೃಷ್ಟಿಯಿಂದ ಹೆಚ್ಚು ಬಿಗಿ ಕ್ರಮಗಳನ್ನು ಕೈಗೊಂಡಿರುವುದಾಗಿ ಎಕ್ಸ್ ಹೇಳಿದೆ.

ಬೀಟಾ ಆವೃತ್ತಿಯಲ್ಲಿ ಬಳಕೆದಾರರು ತಮ್ಮ ವಾಲೆಟ್‌ಗೆ ವೀಸಾ ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್‌ಗಳನ್ನು ಲಿಂಕ್ ಮಾಡಬಹುದಾಗಿದೆ. ಈ ಕ್ರಮವು ವಾಲೆಟ್‌ಗೆ ತಕ್ಷಣವೇ ಹಣ ತುಂಬಲು, ಪಿ2ಪಿ (ಪೀರ್‌ಟುಪೀರ್) ಪಾವತಿಗಳನ್ನು ಮಾಡಲು ಮತ್ತು ಬ್ಯಾಂಕ್ ಖಾತೆಯಿಂದ ಹಣ ಹಿಂಪಡೆಯಲು ಸುಲಭವಾಗಿ ಬಳಕೆದಾರರಿಗೆ ಅನುವು ಮಾಡಿಕೊಡಲಿದೆ.

'ಎಕ್ಸ್ ಮನಿ' ಯಾವಾಗ ಬಿಡುಗಡೆಯಾಗಲಿದೆ ಎಂಬುದರ ಬಗ್ಗೆ ಮಾಹಿತಿ ಹಂಚಿಕೊಳ್ಳದ ಎಕ್ಸ್, ಅದರ ಬೀಟಾ ಪರೀಕ್ಷೆಯ ವೇಳೆ ಬಳಕೆದಾರರಿಂದ ಬರುವ ಪ್ರತಿಕ್ರಿಯೆಗಳತ್ತ ಹೆಚ್ಚು ದೃಷ್ಟಿ ಹರಿಸುತ್ತಿದೆ. ಅಲ್ಲದೆ ಭವಿಷ್ಯದಲ್ಲಿ ಬ್ಯಾಂಕಿಂಗ್ ಸೇವೆಗಳನ್ನೂ ಕಲ್ಪಿಸುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ■

## ಕ್ಯೂಟ್ ಬೇಬಿ ಟ್ರೆಂಡ್

ಕೆಲ ತಿಂಗಳ ಹಿಂದೆ ಜಗತ್ತಿನೆಡೆ ಹೊಸ ಟ್ರೆಂಡ್ ಸೃಷ್ಟಿಸಿದ್ದ ಜಿಬ್ಲಿ ಈಗ ಹಳತು. ಆದರೆ, ಜಿಬ್ಲಿ ಜಾಗಕ್ಕೆ 'ಕ್ಯೂಟ್ ಬೇಬಿ' ಕಾಲಿಟ್ಟಿದೆ. ಜಿಬ್ಲಿ ಅನಿಮೇಟೆಡ್ ಚಿತ್ರವಾದರೆ, ಕ್ಯೂಟ್ ಬೇಬಿ ಮುದ್ದು ಮುದ್ದಾದ ವಿಡಿಯೊ ಆಗಿದೆ. ಅದರಲ್ಲೂ ಪ್ರಧಾನಿ ನರೇಂದ್ರ ಮೋದಿ, ವಿಪಕ್ಷ ನಾಯಕ ರಾಹುಲ್ ಗಾಂಧಿ, ನಾಯಕರೂ ಸೇರಿದಂತೆ ಇತರ ಸಿನಿ ನಟರ ಬಾಲ್ಯದ ವಿಡಿಯೊಗಳು ವೈರಲ್ ಆಗುತ್ತಿವೆ.

70 ವರ್ಷ ದಾಟಿದವರನ್ನು 7 ವರ್ಷಕ್ಕೆ ಇಳಿಸಿ ರಚಿಸಿದ ಗಣ್ಯರ ಬಾಲ್ಯದ ವಿಡಿಯೊಗಳು ಎಲ್ಲರಲ್ಲೂ ನಗು ಉಕ್ಕಿಸುತ್ತಿವೆ. ಮನಸ್ಸಿಗೂ ಆಹ್ಲಾದ ನೀಡುತ್ತಿವೆ. ಹಿರಿಯರು ದೈಹಿಕವಾಗಿ ಮತ್ತೆ ಮಗುವಾಗುವುದು ಅಸಾಧ್ಯದ ಮಾತು. ಆದರೆ, ಈ ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ವಿಡಿಯೊಗಳ ಮೂಲಕ ಅದನ್ನು ಸಾಧ್ಯವಾಗಿಸಿ ಟ್ರೆಂಡ್ ಸೃಷ್ಟಿಸುತ್ತಿದೆ.

ಕೃತಕಬುದ್ಧಿಮತ್ತೆಯಿಂದಾಗಿ ಮತ್ತೆ ಮಗುವಾಗಿರುವ ವಿರಾಟ್ ಕೊಹ್ಲಿ ಕಪ್ ಹಿಡಿದು ಓಡುತ್ತಿರುವ ವಿಡಿಯೊ ಆರ್‌ಸಿಬಿ ಅಭಿಮಾನಿಗಳ ಬಳಗದಲ್ಲಿ ರಾರಾಜಿಸುತ್ತಿದೆ. ನಟರಾದ ಬ್ರಹ್ಮಾನಂದಂ ಮತ್ತು ಮಹೇಶ್ ಬಾಬು ಅವರ ವಿಡಿಯೊಗಳೂ ಸಿನಿಪ್ರಿಯರ ಮನದ ಕದ ತಟ್ಟುತ್ತಿವೆ. ಇದಲ್ಲದೆ, ಕ್ಲಾಸಿಕ್ ಚಲನಚಿತ್ರ ದೃಶ್ಯಗಳನ್ನು ಸಹ ಇದೇ ತಂತ್ರಜ್ಞಾನ ಬಳಸಿಕೊಂಡು ಹಾಸ್ಯಮಯವಾಗಿ ಪರಿವರ್ತಿಸಿ ಹರಿಬಿಡಲಾಗಿದೆ. ■

### ತಯಾರಿಸುವುದು ಹೇಗೆ?

- ಚಾಟ್‌ಜಿಪಿಟಿ ಅಥವಾ ಅಂತಹದ್ದೇ ಪ್ಲಾಟ್‌ಫಾರ್ಮ್ ಕ್ಯೂಟ್ ಬೇಬಿ ವಿಡಿಯೊಗಳನ್ನು ರಚಿಸುತ್ತವೆ. ಈ ಪೈಕಿ ಯಾವುದಾದರೂ ಒಂದಕ್ಕೆ ಲಾಗಿನ್ ಆಗಬೇಕು.
- ವಯಸ್ಕರ ಚಿತ್ರವನ್ನು ಅಪ್‌ಲೋಡ್ ಮಾಡಿ, ಅದನ್ನು ಕ್ಯೂಟ್ ಬೇಬಿ ಚಿತ್ರವನ್ನಾಗಿ ಪರಿವರ್ತಿಸಲು ಕಮಾಂಡ್ ನೀಡಬೇಕು.
- ಚಿತ್ರ ರಚನೆ ಬಳಿಕ ನಿಮಗೆ ಅಗತ್ಯವಿರುವಂತೆ ವಿಡಿಯೊ ರಚಿಸಲು ಟೆಕ್ಸ್ಟ್ ಪ್ರಾಂಪ್ಟ್ ಒದಗಿಸಿ, ವಿಡಿಯೊವನ್ನಾಗಿ ಪರಿವರ್ತಿಸಲು ಕಮಾಂಡ್ ನೀಡಬೇಕು.
- ರಚನೆಯಾದ ವಿಡಿಯೊಗೆ ಅಗತ್ಯವಿರುವ ಆಡಿಯೊ ಸೇರಿಸಿ ಹಂಚಿಕೊಳ್ಳಬಹುದು.




ಕಪ್ ಹಿಡಿದು ಓಡುತ್ತಿರುವ ಕೊಹ್ಲಿ ಎಐ ಚಿತ್ರ